ಕರ್ನಾಟಕ ಸರ್ಕಾರ

ಸಂಖ್ಯೆ:ಲೋಇ 369 ಸಿಆರ್‌ಎಂ 2022(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು,ದಿನಾಂಕ: 27.04.2022

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:

1. ಪ್ರಧಾನ ಇಂಜಿನಿಯರ್, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಕೆ.ಆರ್. ವೃತ್ತ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ), ಕೆ.ಆರ್.ಸರ್ಕಲ್, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಉತ್ತರ), ಧಾರವಾಡ
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಈಶಾನ್ಯ), ಕಲಬುರಗಿ
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಕೇಂದ್ರ ವಲಯ), ಶಿವಮೊಗ್ಗ

ಮಾನ್ಯರೆ,

ವಿಷಯ: ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್ ಅನುಮೋದಿಸುವ ಕುರಿತು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಲೋಇ 51 ಆರ್‌ಡಿಎಫ್ 2019, ದಿನಾಂಕ:18.03.2022
2. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ: 25.04.2022

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ 2 ರ ಸರ್ಕಾರದ ಪತ್ರವನ್ನು ಮುಂದುವರೆಸಲಾಗಿದೆ.

ಸರ್ಕಾರದ ಆದೇಶದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ 2021-22ನೇ ಸಾಲಿನ ಏಕರೂಪ ಅನುಸೂಚಿ ದರಪಟ್ಟಿ ಸಂಪುಟ-I, II ಮತ್ತು III ಜಾರಿಗೆ ಬಂದಿರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಾಗ ಆ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ದರಪಟ್ಟಿ ದರಗಳನ್ನು ಪರಿಗಣಿಸಿ ಮಂಜೂರಾತಿ ನೀಡಲಾಗುತ್ತದೆ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಂಡು ಸ್ವೀಕೃತಗೊಂಡ ಟೆಂಡರ್‌ಗಳನ್ನು ಟೆಂಡರ್ ಸ್ವೀಕೃತಿ ಸಂದರ್ಭದಲ್ಲಿರುವ ದರಪಟ್ಟಿ ದರಗಳಿಗೆ ಹೋಲಿಕೆ ಮಾಡಿ ಟೆಂಡರ್ ಪ್ರೀಮಿಯಂನ್ನು ಕಂಡುಹಿಡಿಯಲಾಗುತ್ತದೆ. ಅದರಂತೆ ದಿನಾಂಕ:18.03.2022 ರ ಅವಧಿಗೆ ಮುಂಚೆ ತಾಂತ್ರಿಕ ಮಂಜೂರಾತಿಯಾಗಿರುವ ಕಾಮಗಾರಿಗಳಿಗೆ 2018-19ನೇ ಸಾಲಿನ ಚಾಲ್ತಿ ದರಪಟ್ಟಿ

ದರಗಳು ಅನ್ವಯವಾಗಲಿದ್ದು ಒಂದು ವೇಳೆ ಇಂತಹ ಕಾಮಗಾರಿಗಳ ಟೆಂಡರ್‌ಗಳನ್ನು ದಿನಾಂಕ:18.03.2022 ಹಾಗೂ ತದನಂತರದಲ್ಲಿ ಸ್ವೀಕರಿಸಿದಲ್ಲಿ ಹೊಸದಾಗಿ ಜಾರಿಗೊಂಡಿರುವ 2021-22ನೇ ಸಾಲಿನ ಏಕರೂಪ ದರಪಟ್ಟಿ ದರಗಳು ಚಾಲ್ತಿ ದರಗಳಾಗುತ್ತದೆ. ಆದರೆ, ಇಂತಹ ಟೆಂಡರುಗಳನ್ನು ಹೋಲಿಕೆ ಮಾಡುವಾಗ 2018-19 ನೇ ಸಾಲಿನ ದರಪಟ್ಟಿ ಹಾಗೂ 2021-22ನೇ ಸಾಲಿನ ಹೊಸ ದರಪಟ್ಟಿಗಳ ಕೆಲವೊಂದು ಸ್ಪೆಸಿಫಿಕೇಷನ್‌ನಲ್ಲಿ ಸಾಮ್ಯತೆ ಇರುವುದಿಲ್ಲವೆಂದು ವಿಭಾಗೀಯ ಅಧಿಕಾರಿಗಳು ತಿಳಿಸಿರುತ್ತಾರೆ. ಅಲ್ಲದೆ, ಇಂತಹ ಕಾಮಗಾರಿಗಳ ಟೆಂಡರ್‌ಗಳಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತವನ್ನು ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೂ ಹಾಗೂ 2021-22ನೇ ಸಾಲಿನ ಹೊಸ ದರಪಟ್ಟಿ ಚಾಲ್ತಿ ದರಗಳಂತೆ ಟೆಂಡರ್‌ಗಿಟ್ಟ ಮೊತ್ತಕ್ಕೂ ಹೋಲಿಸಿದಾಗ ಶೇಕಡಾವಾರು ಪ್ರಮಾಣದಲ್ಲಿ ಬಹಳಷ್ಟು ವ್ಯತ್ಯಾಸ ಕಂಡುಬರುತ್ತಿದೆ.

ಈ ಹಿನ್ನಲೆಯಲ್ಲಿ ರೂ.5.00 ಕೋಟಿಗಳು ಮೊತ್ತದೊಳಗಿನ ಕಾಮಗಾರಿಗಳ ಅಂದಾಜುಪಟ್ಟಿಗಳು ದಿನಾಂಕ:18.03.2022 ರ ಅವಧಿಗೂ ಮುಂಚೆ ತಾಂತ್ರಿಕ ಮಂಜೂರಾತಿಗೊಂಡು, ದಿನಾಂಕ:18.03.2022 ಹಾಗೂ ತದನಂತರದ ದಿನಾಂಕದಲ್ಲಿ ಟೆಂಡರ್ ಸ್ವೀಕೃತಿಯಾಗಿದ್ದರೆ, ಅಂತಹ ಕಾಮಗಾರಿಗಳ ಟೆಂಡರ್ ಗಳಲ್ಲಿ ಗುತ್ತಿಗೆದಾರರು ನಮೂದಿಸಿರುವ ಶೇಕಡವಾರು ಹೆಚ್ಚಳವು ಅನುಮೋದಿತ ಮೂಲ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇ.5 ಕ್ಕಿಂತ ಹೆಚ್ಚಾಗಿದ್ದರೆ, 2021-22ನೇ ಸಾಲಿನ ಹೊಸ ದರಪಟ್ಟಿ ಚಾಲ್ತಿ ದರಗಳಂತೆ ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇ.5 ನ್ನು ಮೀರದೇ ಇದ್ದರೂ ಕೂಡ ಅಂತಹ ಟೆಂಡರುಗಳನ್ನು ಈ ಕೆಳಕಂಡಂತೆ ಹೋಲಿಕೆ ಮಾಡಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವಂತೆ ಕೋರಲು ನಿರ್ದೇಶಿತಳಾಗಿದ್ದೇನೆ.

1. ಅನುಮೋದಿತ ಮೂಲ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತದ ಮೇಲೆ
2. 2018-19 ನೇ ಸಾಲಿನ ದರಪಟ್ಟಿ ದರಗಳಿಗೆ ಚಾಲ್ತಿ ವಿತರಣಾ ದರಗಳನ್ನು ಪರಿಗಣಿಸಿದಾಗ ಆಗುವ ಟೆಂಡರ್‌ಗಿಟ್ಟ ಮೊತ್ತದ ಮೇಲೆ
3. 2021-22ನೇ ಸಾಲಿನ ಏಕರೂಪ ಅನುಸೂಚಿ ದರಪಟ್ಟಿ (ಸಂಪುಟ-I, II ಮತ್ತು III) ದರಗಳಂತೆ ಟೆಂಡರ್‌ಗಿಟ್ಟ ಮೊತ್ತದ ಮೇಲೆ

ಈಗಾಗಲೇ ಅಧಿಕಾರಿಗಳು ಕ್ರಮ ಕೈಗೊಂಡಿದ್ದಲ್ಲಿ ಸದರಿ ಅನುಮೋದಿತ ಟೆಂಡರ್‌ಗಳ ವಿವರಗಳನ್ನು ತಕ್ಷಣವೇ ಸರ್ಕಾರಕ್ಕೆ ಸಲ್ಲಿಸುವುದು. ಇದಕ್ಕೆ ವ್ಯತಿರಿಕ್ತವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ನಂಬುಗೆಯ,

B. Chandrakala

(ಡಿ.ಚಂದ್ರಕಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ಸಂಪರ್ಕ)